ಕರ್ನಾಟಕ ಸರ್ಕಾರ

ಸಂ:ಗ್ರಾಅಪ 06 ಗ್ರಾನೀಸ(3)2015

2ನೇ ಮಹಡಿ, 'E' Block,
K.H.B Complex,
ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು-09, ದಿನಾಂಕ:01.01.2016

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:
ಯೋಜನಾ ನಿರ್ದೇಶಕರು,
ಇ-ಆಡಳಿತ, ಕೊಠಡಿ ಸಂಖ್ಯೆ-108,
ಗೇಟ್ ನಂ-2, 1ನೇ ಮಹಡಿ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-01.

ಮಾನ್ಯರೆ,

ವಿಷಯ : ಹೊಸದಾಗಿ ಸೃಜಿಸಲಾದ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಗೆ ಹೊಸದಾಗಿ LMS / FMS ಪದ್ಧತಿ ಅಳವಡಿಸಿಕೊಳ್ಳಲು LAN ವ್ಯವಸ್ಥೆ ಇಲ್ಲದಿರುವುದರಿಂದ ಇಲಾಖೆಗೆ ಸಂಬಂಧಪಟ್ಟ ಪತ್ರಗಳನ್ನು ನಿಮ್ಮ ಹಂತದಲ್ಲಿಯೇ ಮುಕ್ತಾಯಗೊಳಿಸುವ ಬಗ್ಗೆ.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಗ್ರಾಮೀಣ ನೀರು ಸರಬರಾಜು ಶಾಖೆ ಬಹುಮಹಡಿಗಳ ಕಟ್ಟಡದಿಂದ ಕೆಹೆಚ್‌ಬಿ ಕಾಂಪ್ಲೆಕ್ಸ್, 2ನೇ ಮಹಡಿ, ಕಾವೇರಿ ಭವನ ಬೆಂಗಳೂರು ಇಲ್ಲಿಗೆ ಸ್ಥಳಾಂತರಗೊಂಡಿದ್ದು, ಕಾವೇರಿ ಭವನದ ಕಛೇರಿಯಲ್ಲಿ **LMS / FMS** ವ್ಯವಸ್ಥೆ ಇಲ್ಲದೇಯಿರುವುದರಿಂದ ಪತ್ರ ನಿರ್ವಹಣೆ **(LMS)** ಮತ್ತು ಕಡತ ನಿರ್ವಹಣೆ **(FMS)** ಮಾಡುವುದು ಸಾಧ್ಯವಾಗುತ್ತಿಲ್ಲ. ಪತ್ರಗಳ ಸ್ವೀಕೃತಿ ಮತ್ತು ವಿಲೇವಾರಿಯನ್ನು ಸಾಮಾನ್ಯ ಸ್ವೀಕೃತಿ ಹಾಗೂ ವಿಲೇವಾರಿ ವಹಿಯ(ರಿಜಿಸ್ಟ್ರಾರ್) ಮೂಲಕ ನಿರ್ವಹಿಸಲಾಗುತ್ತಿದೆ.

ಅಧಿಕ ಪತ್ರ ವ್ಯವಹಾರ ಮತ್ತು ಸಾರ್ವಜನಿಕ ಸ್ವೀಕೃತಿಗಳಿರುವ ಈ ಪ್ರಾಮುಖ್ಯತಾ ಶಾಖೆಯಲ್ಲಿನ ಪತ್ರ ಹಾಗೂ ಚಲನವಲನ ದಾಖಲೆಗಳ ಇಂಧೀಕರಣವನ್ನು ಗಣಕಯಂತ್ರದ ಮೂಲಕ ನಿರ್ವಹಿಸುವುದು ಸಾಧ್ಯವಾಗುತ್ತಿಲ್ಲ ಹಾಗೂ LAN ವ್ಯವಸ್ಥೆಯ ಅನುಷ್ಠಾನಕ್ಕೆ ಸುಮಾರು ರೂ.1.50ಕೋಟಿಗಳ ವೆಚ್ಚದ ಅವಶ್ಯಕತೆಯಿದೆಯೆಂದು ತಿಳಿದು ಬಂದಿದೆ. ಸದ್ಯಕ್ಕೆ LAN ವ್ಯವಸ್ಥೆಯ ಅನುಷ್ಠಾನ ವಿಳಂಬವಾಗುವ ಸಂಭವವಿರುವುದರಿಂದ ಇಲಾಖೆಗೆ ಸಂಬಂಧಪಟ್ಟ ಪತ್ರಗಳನ್ನು ನಿಮ್ಮ ಹಂತದಲ್ಲಿಯೇ ಮುಕ್ತಾಯಗೊಳಿಸುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

1/1/16

(ಎಂ. ಮಂಜುನಾಥ್ ನಾಯಕ್)
ಆಯುಕ್ತರು ಹಾಗೂ ಸರ್ಕಾರದ ಅಪರ ಕಾರ್ಯದರ್ಶಿಗಳು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಪ್ರತಿ:
1. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ ಕಾರ್ಯಕಾರಿ, ವಿಧಾನಸೌಧ ಬೆಂಗಳೂರು-01 ರವರಿಗೆ ಉಲ್ಲೇಖಿತ ಪತ್ರದ ಪ್ರತಿಗಳೊಂದಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
2. ವಿಶೇಷ ಅಧಿಕಾರಿ, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.